ZEE ಕನ್ನಡ

# ಮತ್ತೆ ಶುರುವಾಗಲಿದೆ ಸರಿಗಮಪ ಲಿಟ್ಲ್‌ಚಾಂಪ್ಸ್

## ಈ ಸೀಸನ್ ಪೋಷಕರಿಗೆ ಅರ್ಪಣೆ

ಕನ್ನಡ ಕಿರುತೆರೆಯಲ್ಲಿ ರಿಯಾಲಿಟಿ ಶೋಗಳಿಗೆ ಹೊಸ ತಿರುವನ್ನು ಕೊಟ್ಟ ಜೀ ಕನ್ನಡ, ತನ್ನ ಹೆಮ್ಮೆಯ ಸಂಗೀತ ಕಾರ್ಯಕ್ರಮವಾದ ಸರಿಗಮಪ ಲಿಟ್ಲ್ ಚಾಂಪ್ಸ್ ಸೀಸನ್ 14ನ್ನು ಮತ್ತೆ ಶುರು ಮಾಡುತ್ತಿದೆ. ಈ ಹಿಂದೆ ನಡೆದ ಸರಿಗಮಪ ಲಿಟ್ಲ್ ಚಾಂಪ್ಸ್ ಅಭೂತಪೂರ್ವ ಯಶಸ್ಸು ಕಂಡಿದ್ದು, ಅಲ್ಲಿ ಅನ್ವಿತಾ ಶ್ರೀಧರ್ ವಿಜೇತರಾಗಿದ್ದರು. ಕನ್ನಡ ಕಿರುತೆರೆಯ ಇತಿಹಾಸದಲ್ಲಿ ಇದೇ ಪ್ರಪ್ರಥಮ ಬಾರಿಗೆ ಜೀ಼ ಕನ್ನಡ ಕರ್ನಾಟಕದ 30 ಜಿಲ್ಲೆಗಳಲ್ಲಿಯೂ ಸರಿಗಮಪ ಲಿಟ್ಲ್ ಚಾಂಪ್ಸ್ ಸೀಸನ್ 14ನ ಆಡಿಷನ್ ಈಗಾಗಲೇ ನಡೆಸಿದೆ. ಇಷ್ಟು ದಿನ ನಡೆಯುತ್ತಿದ್ದ ನಾಲ್ಕರಿಂದ ಐದು ಜಿಲ್ಲೆಗಳ ಆಡಿಷನ್‌ನಲ್ಲಿ, ಆಡಿಷನ್ ಕೇಂದ್ರಕ್ಕೆ ಬರಲಾಗದ ಎಷ್ಟೋ ಪ್ರತಿಭೆಗಳು ಅವಕಾಶ ವಂಚಿತರಾಗುತ್ತಿದ್ದರು. ಆದರೆ ಈ ಬಾರಿ ಜೀ಼ ಕನ್ನಡ ಕರ್ನಾಟಕದ ಪ್ರತಿ ಜಿಲ್ಲೆಯ ಮೂಲೆ-ಮೂಲೆಯನ್ನೂ ಜಾಲಾಡಿ, ಈ ಮೂಲಕ ಯಾವ ಪ್ರತಿಭೆಯೂ ಕೂಡ ಅವಕಾಶ ವಂಚಿತವಾಗದಂತೆ ನೋಡಿಕೊಂಡಿದೆ.

ಸರಿಗಮಪ ಲಿಟ್ಲ್ ಚಾಂಪ್ಸ್ ಈ ಬಾರಿಯ ಸೀಸನ್ ಪೋಷಕರಿಗೆ ಅರ್ಪಣೆ. ಯಾಕೆ ಅಂತೀರಾ, ಮಗುವಿನ ಸಂಗೀತ ಆಸಕ್ತಿಯನ್ನು ಮೊದಲು ಗುರುತಿಸಿ, ಸಂಗೀತಾಭ್ಯಾಸದಲ್ಲಿ ತೊಡಗಿಸಿ, ಅವರ ಗಾಯನದ ಮೊದಲ ಕೇಳುಗರಾಗಿ, ಅಭಿಮಾನಿಗಳಾಗಿ ಅವರ ಪ್ರತೀ ಗೆಲುವಿನಲ್ಲಿ ಸಂಭ್ರಮಿಸಿ, ಸೋಲಿನಲ್ಲಿ ಧೈರ್ಯ ತುಂಬಿ ಸಾಧಕರನ್ನಾಗಿ ಮಾಡುವ ಪೋಷಕರ ಪಾತ್ರ ದೊಡ್ಡದು. ಮಕ್ಕಳ ಕನಸನ್ನು ತಮ್ಮ ಕನಸನ್ನಾಗಿಸಿ, ಅದರ ಯಶಸ್ಸಿಗೆ ಶ್ರಮಿಸುವ ಎಲ್ಲ ಅಪ್ಪ-ಅಮ್ಮಂದಿರೇ ಸರಿಗಮಪ ಯಶಸ್ವೀ ಪಯಣದ ಸ್ಫೂರ್ತಿ ಮತ್ತು ನಿಜವಾದ ಪ್ರೇರಣೆ.

ಸರಿಗಮಪ ಲಿಟ್ಲ್ ಚಾಂಪ್ಸ್ ಸೀಸನ್‌ನಲ್ಲಿ 14 ಎಂದಿನಂತೆ ಮೊದಲ ಸಂಚಿಕೆಯು ಮೆಗಾ ಆಡಿಷನ್‌ನಿಂದ ಕೂಡಿರುತ್ತದೆ. ಈ ಮೆಗಾ ಆಡಿಷನ್‌ನಲ್ಲಿ 30 ಜನ ಸ್ಪರ್ಧಿಗಳು ಭಾಗವಹಿಸುತ್ತಾರೆ. ಇವರಲ್ಲಿ ಯಾರು ತಮ್ಮ ಇಂಪಾದ ದನಿಯಿಂದ ತೀರ್ಪುಗಾರರ ಕಣ್ಣಿಗೆ ಕಟ್ಟಿದ ಬಟ್ಟೆಯನ್ನು ತೆರೆಸುತ್ತಾರೋ ಅವರು ಈ ಸೀಸನ್‌ನಲ್ಲಿ ಮುಂದುವರೆಯುತ್ತಾರೆ. ಈ ಬಾರಿಯ ಸರಿಗಮಪ ಲಿಟ್ಲ್ ಚಾಂಪ್ಸ್‌ನಲ್ಲಿ ತೀರ್ಪುಗಾರರಾಗಿ ಮ್ಯಾಜಿಕಲ್ ಕಂಪೋಸರ್ ಅರ್ಜುನ್ ಜನ್ಯ ಹಾಗೂ ವಿಜಯ ಪ್ರಕಾಶ್ ಜೊತೆಗೆ ಮಹಾಗುರುಗಳಾಗಿ ನಾದಬ್ರಹ್ಮ ಹಂಸಲೇಖ ಅವರ ಉಪಸ್ಥಿತಿ ಈ ಸೀಸನ್‌ನ ಮೆರುಗು ಹೆಚ್ಚಿಸಲಿದೆ. ಇನ್ನು ಮುಂದೆ ಪ್ರತಿ ವಾರ ಮಹಾಗುರು ಹಂಸಲೇಖ ಅವರ ಅನುಭವದ ನುಡಿಮುತ್ತುಗಳನ್ನು ಆಲಿಸುವುದೇ ಮಹದಾನಂದ. ಎಂದಿನಂತೆ ವೇದಿಕೆಯ ಲವಲವಿಕೆ ಅನುಶ್ರೀ ತಮ್ಮದೇ ಶೈಲಿಯಲ್ಲಿ ಹೊಸ ಸ್ಪರ್ಧಿಗಳನ್ನು ಬರಮಾಡಿಕೊಳ್ಳಲು ಅವರನ್ನು ಹುರಿದುಂಬಿಸಲು ಸಜ್ಜಾಗಿದ್ದಾರೆ.

ಈ ಬಾರಿಯೂ ಸರಿಗಮಪ ಸಂಗೀತ ಮಹಾ ವೇದಿಕೆಯು 15 ಜನ ಜ್ಯೂರಿ ಮೆಂಬರ್ಸ್ ಇರುತ್ತಾರೆ. ಪ್ರತಿಯೊಂದು ಸ್ಪರ್ಧಿಗೂ ಜ್ಯೂರಿ ಮೆಂಬರ್ಸ್ ಸ್ಕೋರ್ಸ್ ನೀಡುತ್ತಾರೆ. ಹಾಗೂ ಉಳಿದ ತೀರ್ಪುಗಾರರು ಹಿಡನ್ ಸ್ಕೋರನ್ನು ನೀಡುತ್ತಾರೆ. ಕರ್ನಾಟಕದ ಬಹುನಿರೀಕ್ಷೆಯ ಮಕ್ಕಳ ಮ್ಯೂಸಿಕ್ ರಿಯಾಲಿಟಿ ಶೋ ಸರಿಗಮಪ ಸೀಸನ್ 14 ಇದೇ ಡಿಸೆಂಬರ್ 9 ರಿಂದ ಪ್ರತಿ ಶನಿ-ಭಾನು ರಾತ್ರಿ 7.30ಕ್ಕೆ ಪ್ರಸಾರವಾಗಲಿದ್ದು, ಈ ಬಾರಿಯೂ ಜನಮೆಚ್ಚುಗೆಯ ಕಾರ್ಯಕ್ರಮವಾಗಿ ಮತ್ತು ಹೊಸ ಪ್ರತಿಭೆಗಳನ್ನು ಪರಿಚಯಿಸುವ ವೇದಿಕೆಯಾಗುವುದರಲ್ಲಿ ಯಾವುದೇ ಅನುಮಾನವಿಲ್ಲ.



SAREGAMAPA

Lil Champs

SEASON 14

## ಡಿಸೆಂಬರ್ 9 ರಿಂದ

## ಶನಿ – ಭಾನು ರಾತ್ರಿ 7.30ಕ್ಕೆ